ಪ್ರಕಟಣೆ

ಅಧ್ಯಕ್ಷರು:- ನಿಮಗೆ ಇನ್ನು ಅವಕಾಶವನ್ನು ಕೊಡುತ್ತೇನೆ. ಒಂದು ಸಣ್ಣ ಅನೌನ್ಸ್‌ಮೆಂಟ್ ಮಾಡಬೇಕಾಗಿದೆ. ಈ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ನನಗೆ ಸಹಕರಿಸುವುದಕ್ಕೆ ಪ್ಯಾನಲ್ ಆಫ್ ಛೇರ್ಮನ್ ಎಂದು ಮಾಡಿದ್ದೇವಲ್ಲಾ, ಅದಕ್ಕೆ ಎರಡು ಹೆಸರುಗಳನ್ನು ಸೇರಿಸಬೇಕೆಂಬ ಉದ್ದೇಶದಿಂದ ಶ್ರೀ ಬನ್ನಿಕೋಡ್ ಮತ್ತು ಶ್ರೀ ಜಿ.ಎಸ್. ಶಿವನಂಜಪ್ಪ ಇವರುಗಳನ್ನು ಕೂಡ ಸೇರಿಸುತ್ತಿದ್ದೇನೆ. ಇನ್ನು ತಾವು ಮುಂದುವರಿಸಬಹುದು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

ಶ್ರೀ ಬಿ. ಎಂ. ಇದಿನಬ್ಬ:- ನಾನು ರಾಜ್ಯಪಾಲರ ಭಾಷಣದಲ್ಲಿರುವ ಸೂಕ್ಷ್ಮ ವಿಚಾರಗಳನ್ನು ಹೇಳುತ್ತಿದ್ದೆ. ಇನ್ನು ಅಲ್ಪಸಂಖ್ಯಾತರ ಒಂದು ರಿಪೋರ್ಟ್‌ನ್ನು ಹಿಂದಿನ ಸರ್ಕಾರ ಇರುವಾಗ ಮಾಡಿತ್ತು. ಗೂಢವಾಲ ಎಂದು ಒಬ್ಬರು, ಮೊಹಿಸೀನ್ ಎನ್ನುವವರು ಇನ್ನೊಬ್ಬರು. ಈ ಇಬ್ಬರ ರಿಪೋರ್ಟ್ ಕೂಡ ಬಂದಿದೆ. ಗೂಢವಾಲರ ರಿಪೋರ್ಟ್ ಗೂಢವಾಗಿಯೇ ಉಳಿದಿದೆ. ಮೊಹಿಸೀನ್ ಅವರ ರಿಪೋರ್ಟ್ ಏನಾಗಿದೆಯೋ ಎಂದು ಯಾರಿಗೂ ಗೊತ್ತಿಲ್ಲ. ಆದುದರಿಂದ ಅಲ್ಪಸಂಖ್ಯಾತ ವರ್ಗದವರ ಹಿತಕ್ಕಾಗಿ ಮಾಡಿರತಕ್ಕಂಥ ಈ ಒಂದು ರಿಪೋರ್ಟ್ ಏನಾಗಿದೆ ಎಂಬುದನ್ನು ಸಹಾ ನಾವು ತಿಳಿಯಬೇಕು.

ಅವರಿಗೆ ಸಿಗತಕ್ಕಂಥ ಸೌಲಭ್ಯ ಏನು ಎಂಬುದನ್ನು ತಿಳಿಯಬೇಕು. ಅದನ್ನು ಕೂಡ ಈಗ ನಮ್ಮ ಸರ್ಕಾರ ಕೈಗೆತ್ತಿಗೊಂಡು ನೋಡಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನು ವಕ್ಫ್ ಬೋರ್ಡ್ ಎಂದು ಒಂದುಂಟು. ವಕ್ಫ್ ಬೋರ್ಡ್ ಬಗ್ಗೆ ಕೆಲವರು ಹೇಳುತ್ತಾರೆ, ಅದು ಸ್ವತಂತ್ರವಾಗಿದೆ, ಸರ್ಕಾರದ ಕೆಲವು ತನಿಖೆಗೆ ಮಾತ್ರ ಇದೆ. ಆದುದರಿಂದ ವಕ್ಫ್ ಬೋರ್ಡ್‌ನವವರು ಅವರಷ್ಟಕ್ಕೆ ಅವರು ಕೆಲವು ಕೆಲಸಗಳನ್ನು ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಅದರ ಬಗ್ಗೆ ಸರ್ಕಾರಕ್ಕೆ ಸರಿಯಾದ ಹಿಡಿತ ಇರಬೇಕು. ಜಿಲ್ಲೆ ಜಿಲ್ಲೆಗಳಲ್ಲಿ ವಕ್ಫ್ ಬೋರ್ಡ್‌ಗಳನ್ನು ರಚನೆ ಮಾಡುವಾಗ ಅಥವಾ ಅಧ್ಯಕ್ಷರನ್ನು ರಚನೆ ಮಾಡುವಾಗ ಸರಿಯಾದಂಥ ಜನರನ್ನು ನೇಮಕ ಮಾಡತಕ್ಕಂಥ ವ್ಯವಸ್ಥೆ ಬಗ್ಗೆ ಕೂಡ ಸರ್ಕಾರ ಆಲೋಚನೆ ಮಾಡಬೇಕು. ಅದರಲ್ಲಿ ವಕ್ಫ್ ಬೋರ್ಡ್‌ನವರದ್ದೇ ಮೇಲಾಗಬೇಕು ಅಥವಾ ಸರ್ಕಾರದ್ದೇ ಮೇಲಾಗಬೇಕು ಎಂದು ಹೇಳತಕ್ಕಂಥ ರೀತಿಯಲ್ಲಿ ಎಲ್ಲರಿಗೂ ಸರಿಸಮಾನ ಎಂದು ಹೇಳತಕ್ಕಂಥ ರೀತಿಯ ವ್ಯವಸ್ಥೆಯಾಗಬೇಕು. ವಕ್ಫ್ ಬೋರ್ಡ್ ಕೂಡ ಒಂದು ರೀತಿಯಲ್ಲಿ ಮಾರ್ಪಾಡಾಗಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಅಪೇಕ್ಷಪಡುತ್ತೇನೆ. ಇನ್ನು ಬಹಳ ಮುಖ್ಯವಾಗಿ ನಮ್ಮ ಪರಿಸರದ ಅರಣ್ಯದ ವಿಚಾರವನ್ನು ನಾನು ಹೇಳುತ್ತಿದ್ದೆ. ಈ ಅರಣ್ಯ ಉಳಿಯದಿದ್ದರೆ, ಪರಿಸರ ಒಳ್ಳೆಯದಾಗದಿದ್ದರೆ ನಮ್ಮ ನಾಡಿಗೆ ಕೀರ್ತಿ ಬರುವುದಕ್ಕೆ ಸಾಧ್ಯವಿಲ್ಲ. ಇವತ್ತು ಪರಿಸರ ಮಾಲಿನ್ಯದಿಂದ ಆಗಿರತಕ್ಕಂಥ ಅನಾಹುತ ಏನು ಎಂದು ನಮಗೆ ಗೊತ್ತಿದೆ. ಪರಿಸರ ಮಾಲಿನ್ಯ ನಿಯಂತ್ರಣ ಇಲಾಖೆಯಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಸಾರಿ ಅದಕ್ಕಾಗಿ ಬೇರೆ ತೆಗೆದಿಟ್ಟಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಅದರ ಮಂತ್ರಿಗಳಾಗಿ ಬಹಳ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ಪರಿಸರ ಮಾಲಿನ್ಯದಿಂದಾಗಿ ಇಡೀ ನಮ್ಮ ನಾಡೇ ಹಾಳಾಗಿದೆ. ಅರಣ್ಯ ಕೂಡ ಸಂಪೂರ್ಣವಾಗಿ ಕಾಡು ಕಳ್ಳರ ವಶವಾಗಿದೆ. ಕಾಡುಕಳ್ಳರು ಅರಣ್ಯವನ್ನು ನಾಶಮಾಡುವುದನ್ನು ತಪ್ಪಿಸಬೇಕು. ಹಿಂದೆ ಒಬ್ಬ ಬ್ರಿಟಿಷ್ ತಜ್ಞ ಭಾರತವನ್ನು ನನ್ನ ಕೈಯಲ್ಲಿ ಆಳುವುದಕ್ಕೆ ಬಿಟ್ಟರೆ, ನಾನು ಈ ದೇಶದ ಅರಣ್ಯ ಸಂಪತ್ತಿನಿಂದ 50 ವರ್ಷ ರಾಜ್ಯಭಾರ ಮಾಡಿಯೇನು ಎಂದು ಹೇಳಿದ್ದ. ಹಾಗಿದ್ದರೆ ಆ ಅರಣ್ಯ ಸಂಪತ್ತು ಎಷ್ಟು ದೊಡ್ಡದೆಂದು ನಾವು ಆಲೋಚನೆ ಮಾಡಬಹುದು. ಇಂತಹ ಅರಣ್ಯ ಸಂಪತ್ತು ಇವತ್ತು ಹಾಳಾಗಿಹೋಗುತ್ತಿದೆ. ಇವತ್ತು ಕವಿಗಳೇ ಅದರ ವರ್ಣನೆಯನ್ನು ಮಾಡುತ್ತಿದ್ದಾರೆ.

"ಹರಿಹರ ರಾಘವರಿಗೆ ಎರಗುವ ಮನ
ಹಾಳಾಗಿ ಹಂಪೆಗೆ ಕೊರಗುವ ಮನ
ಪಂಪನ ಬನವಾಸಿಗೆ ಮರುಗುವ ಮನ
ಜೋಗದ ಜಲಪಾತದಿ ದುಮುಕುವ ಮನ
ಮಲೆನಾಡಿಗೆ ಹೊಂಕುಳಿ ಹೋಗುವ ವಕ್ಫ"